ಜಿಮ್ಮು... ಇತ್ಯಾದಿ ಇತ್ಯಾದಿ. ಅವನ ಮನೆಯಲ್ಲಿ ಇಲ್ಲದ ವಸ್ತುಗಳೇ ಇಲ್ಲ. ಇಡೀ ಮನೆಯೇ ಒಂದು ಸುಂದರ ವೈಭವೋಪೇತ ಶೋರೂಮಿನಂತೆ ಗೋಚರಿಸುತ್ತಿತ್ತು. ನನ್ನಲ್ಲೂ ಇವನಲ್ಲಿರುವ ಐದು ಪರ್ಸಂಟ್ ದುಡ್ಡಾದರೂ ಇದ್ದಿದ್ದರೆ ಎನ್ನಿಸಿತೆನಗೆ. ಆದರೆ ಎಲ್ಲಿಯೂ ಗೋಡೆಗಳೇ ಇಲ್ಲ.

'ಇದೇನಯ್ಯ ಇದು?' ಎಂದೆ.

'ನಂದೊಂತರಾ ವಿಭಿನ್ನ style. ಎಲ್ಲೂ ಗೋಡೆಗಳಿರಕೂಡದು. ಮನದಲ್ಲೂ ಮನೆಯಲ್ಲೂ' ಎಂದು ಫಿಲಾಸಫಿಯ ಮಾತನಾಡಿದ.

ಅದೆಲ್ಲ ಇರಲಿ, ಶೌಚಗ್ರಹಕ್ಕೂ ಗೋಡೆಗಳಿರಲಿಲ್ಲ ಅಲ್ಲಿ! ಅತ್ಯಂತ ಮೋಹಕ ವಿನ್ಯಾಸದ ವಾಷ್‌ಬೇಸಿನ್ನು, ಕಮೋಡು, ಶವರ್ ಉಪಕರಣಗಳು ಖುಲ್ಲಾಂಖುಲ್ಲ ಎದ್ದು ಕಾಣುತ್ತಿದ್ದವು. ನಾನು ಕೇಳುತ್ತೇನೆಂದು ಊಹಿಸಿ ಆತನೇ ಉತ್ತರಿಸಿದ. 'ನಿನಗೆ ಗೊತ್ತಲ್ಲ, ಟಾಯಲೆಟ್ಸ್ ಆರ್ ನೋ ಮೋರ್ ಟಾಯ್ಲೆಟ್ಸ್ ನೌ. ಅವು ಮನೆಯ ಫ್ಯಾಷನ್ ರೂಮ್‌ಗಳೆಂದು ಗುರುತಿಸಿಕೊಳ್ಳುತ್ತದೆ. ಯುರೋಪಿನಲ್ಲೆಲ್ಲಾ ಹೀಗೇ. ನಾವೂ ಬದಲಾಗಬೇಕು. ಆ ದಿನವೂ ದೂರವೇನಿಲ್ಲ ಬಿಡು. ಮೊದಲೆಲ್ಲಾ ಸಂಡಾಸು ಮನೆಯಿಂದ ದೂರವಿರುತ್ತಿತ್ತು, ನಂತರ ಹೊರಗೇ ಇದ್ದರೂ ಮನೆಗೆ ತಾಗೇ ಇರುತ್ತಿತ್ತು, ಆಮೇಲೆ ಅದು ಮನೆಯ ಒಳಗೇ ಬಂತು, ಈಗ ಮಲಗುವ ಕೋಣೆಯ ಒಳಗೆ ಬಂದಿದೆ... ವದ್ಧಾ ವದ್ಧಾss... ವಿ ಆರ್ ಇಂಡೀಡ್ ಡೆವಲಪ್ಪಿಂಗ್...'

ಆತನ ಮಾತಿನ ಕಡೆ ಗಮನ ಕೊಡದೇ ನಾನು ಆ ಓಪನ್ ಬಾತ್‌ರೂಮನ್ನೇ ನೋಡುತ್ತಾ ನಿಂತಿದ್ದೆ. ಈ ಸಂಡಾಸಿಗೆ ಬಹಿರ್ದೆಸೆ, ಹೊರಕಡೆ ಎಂದೆಲ್ಲ ಯಾವ ಯಾವ ಪ್ರದೇಶದಲ್ಲಿ ಏನೆಲ್ಲಾ ಶಬ್ದ ಬಳಸುತ್ತಾರೆ ಹಾಗೂ ಅದು ಯಾಕೆ ಎಂದು ನನ್ನ ಅಜ್ಜ ಉದಾಹರಣೆಗಳೊಂದಿಗೆ ವಿವರಿಸುತ್ತಿದ್ದುದು ಅಯಾಚಿತವಾಗಿ ನೆನಪಾಯಿತು ನನಗೆ.

'ಏನಪ್ಪಾ, ಎಷ್ಟೇ ಚೆಂದದ ತುಟ್ಟಿಯ ಕಮೋಡ್ ಇದ್ದರೂ ಅದನ್ನು ಉಪಯೋಗಿಸುವುದು ಮಾತ್ರ ಅದೇ ಕೆಲಸಕ್ಕೇ ತಾನೇ, ಎಂದು ಯೋಚಿಸುತ್ತಿದ್ದೀಯಾ?' ಎನ್ನುತ್ತ ಕೈಲಿರುವ ರಿಮೋಟಿನ ಗುಂಡಿ ಒತ್ತಿದ ಆತ. ನೋಡುತ್ತಿರುವಂತೆಯೇ ಮೇಲಿನ ಸೀಲಿಂಗಿನಿಂದ ಪರದೆಯೊಂದು ನಿಧಾನವಾಗಿ ಕೆಳಗಿಳಿಯುತ್ತ ಬಾತ್ ರೂಮಿನ ಸುತ್ತ ನೆಲದವರೆಗೆ ಬಂದು ನಿಂತಿತು. ನಾನು ಅವಕ್ಕಾಗಿ ನೋಡುತ್ತಾ ನಿಂತೆ. 'ಹೇಗಿದೆ ಲೇಟೆಸ್ಟ್ ಟೆಕ್ನಾಲಜಿ? ಸಿಕ್ಕಿತಲ್ಲ ನೀನು ಬಯಸುವ ಪ್ರೈವಸಿ ಈಗ. ಈ ಪರದೆಯನ್ನು ನೆಲಕ್ಕೆ ಲಾಕ್ ಕೂಡ ಮಾಡಬಹುದು. ಆಗ ಅದನ್ನು ಸುಲಭದಲ್ಲಿ ಸರಿಸಲೂ ಆಗುವುದಿಲ್ಲ' ಎಂದ. ನಾನು ಸಂಪೂರ್ಣ ಪ್ರಭಾವಿತನಾಗಿ ಹೋದೆ. 'ನನಗೊಂದು ಕನಸಿದೆ...' ಎನ್ನುತ್ತ ಆತ ಮಾತು ಮುಂದುವರಿಸಿದ. 'ಇದರಲ್ಲಿ ಇನ್ನೂ ಹೊಸ ಅನ್ವೇಷಣೆಯಾಗಬೇಕು. ಅದನ್ನು ನಾನೇ ಕಂಡುಹಿಡಿಯಬೇಕು. ಗುಂಡಿ ಒತ್ತಿದ ಕೂಡಲೇ ಈ ಪರದೆಯ ಬದಲಿಗೆ, ಛಾವಣಿಯಿಂದ ವಿಶಿಷ್ಟ ಶಕ್ತಿಯುಳ್ಳ ಕಣ್ಣಿಗೆ ಕಾಣದ ಲೇಸರ್ ಕಿರಣಗಳು ಕೆಳಗಿಳಿಯಬೇಕು. ಅವು ಬೆಳಕಿನ ಕಿರಣಗಳು ಮುಂದೆ ಸಾಗದಂತೆ ತಡೆಯಬಲ್ಲವಾಗಿರಬೇಕು. ಆಗ ಬಾತ್‌ರೂಮಿನ ಒಳಗಡೆಯೆಲ್ಲ ಕತ್ತಲೆಯೇ ಇರುತ್ತದೆ. ಹೊರಗಿನವರಿಗೆ ಅಲ್ಲೇನೂ ಕಾಣುವುದಿಲ್ಲ. ಫಾರ್ ದೆಮ್ ಇಟ್ ಇಸ್ ಜಸ್ಟ್ ಅ ಬ್ಲಾಕ್ ಬಾಕ್ಸ್. ಒಳಗಿರುವವ ತನಗೆ ಬೇಕೆಂದರೆ ಲೈಟ್ ಉರಿಸಿಕೊಳ್ಳಬಹುದು. ಆ ಒಳಗಿನ ದೀಪ ಹೊರಗಿನವರಿಗೆ ಕಾಣುವುದಿಲ್ಲ. ಗೋಡೆ ಮಾಡುವ ಕೆಲಸವನ್ನು ಇಲ್ಲಿ ಅಗೋಚರ ಲೇಸಾರ್ ಕಿರಣಗಳು ಮಾಡುತ್ತವೆ. ಇದೊಂಥರ ಕೃತಕವಾಗಿ ಕತ್ತಲನ್ನ ಸೃಷ್ಟಿ ಮಾಡಿದಂತೆ... ಒಂದು ಮಾತು ಹೇಳುತ್ತೇನೆ